**SC 21/2019**
**PW-22**

**ಸಾಕ್ಷಿಯನ್ನು ದಿನಾಂಕ 29.10.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ** ಸರ್ಕಾರಿ ವಕೀಲರಿಂದಃ

ನಾನು ರಿ ಸರ್ವೇ ನಂ.120/2 ರ ಕ್ಷೇತ್ರ 2 ಎಕರೆ 38 ಗುಂಟೆ ಮತ್ತು ರಿ ಸರ್ವೇ ನಂ.235 ಕ್ಷೇತ್ರ 2 ಎಕರೆ 4 ಗುಂಟೆ ಜಮೀನುಗಳ ಬಗ್ಗೆ ಕ್ರಯ ಪತ್ರದ ಮೂಲ ದಾಖಲೆಗಳನ್ನು ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿದ್ದರು, ಆ ವೇಳೆಯಲ್ಲಿ ನಾನು ಹಾಜರು ಇದ್ದೆ. ನಾನು ಆ ದಾಖಲೆಗಳನ್ನು ನೋಡಿದರೇ ಗುರುತಿಸುತ್ತೇನೆ. ಸಾಕ್ಷಿದಾರರು 4 ಖಾಲಿ ಚೆಕ್ಕುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-41 ಎಂದು ಒಟ್ಟಾಗಿ ಗುರುತಿಸಿದ್ದು, ನ್ಯಾಯಾಲಯದ ಅನುಕೂಲಕೊಸ್ಕರ ಸದರಿ 4 ಚೆಕ್ಕುಗಳನ್ನು ಒಟ್ಟಾಗಿ **ನಿಪಿ-41(ಜಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಎಂ.ಸವಿತಾ ರವರ ಎಡಗೈ ಹೆಬ್ಬೆಟ್ಟಿನ ಗುರತು ಇರುವ ಖಾಲಿ ಚಾಪ ಕಾಗದ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-41 ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ರವಿಕುಮಾರ ಎಂಬುವವರ ಎಡಗೈ ಹೆಬ್ಬೆಟ್ಟಿನ ಗುರತು ಇರುವ ಖಾಲಿ ಚಾಪ ಕಾಗದ ನೋಡಿ ಗುರುತಿಸಿದ್ದು ಅದನ್ನು ಸಹ ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿದ್ದು ನ್ಯಾಯಾಲಯದ ಅನುಕೂಲಕೊಸ್ಕರ ಅದನ್ನು **ನಿಪಿ-41(ಎಚ್)** ಎಂದು ಗುರುತಿಸಲಾಯಿತು. ಖಾಲಿ ಇರುವ ರವಿಕುಮಾರ ರವರ ಆನ್ ಡಿಮ್ಯಾಂಡ್ ಪ್ರನೋಟ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿದ್ದು, ನ್ಯಾಯಾಲಯದ ಅನುಕೂಲಕೊಸ್ಕರ ಅದನ್ನು **ನಿಪಿ-41(ಐ)** ಎಂದು ಗುರುತಿಸಲಾಯಿತು. ದಿ.25.03.2011ರ ಮೂಲ ದಾನಪತ್ರ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ದಿ.12.10.2012 ರಂದು ಎಂ.ಸವಿತಾ ರವರು ಎಂ.ಬಿ

ವೇದಾವತಿರವರಿಗೆ ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರ ಮತ್ತು ಹಣ ಸಂದಾಯ ರಸೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ರಿ ಸರ್ವೇ ನಂ.235 ರ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಈಗಾಗಲೇ ನಿಪಿ-41ರ ದಾಖಲೆಯಾಗಿ ಗುರುತಿಸಲ್ಪಟ್ಟಿದ್ದು, ನ್ಯಾಯಾಲಯದ ಅನುಕೂಲಕೊಸ್ಕರ ಅದನ್ನು **ನಿಪಿ-41(ಜೆ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು 4 ಬೆಳೆ ದೃಡೀಕರಣ ದಾಖಲೆ ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಸಹ ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿದ್ದು, ನ್ಯಾಯಾಲಯದ ಅನುಕೂಲಕೊಸ್ಕರ ಸದರಿ ದಾಖಲೆಗಳನ್ನು ಒಟ್ಟಾಗಿ **ನಿಪಿ-41(ಕೆ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಚುನಾವಣಾ ಗುರುತಿನ ಚೀಟಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿರುತ್ತದೆ. ಬ್ಯಾಂಕ್ ರಸೀದಿ, ಪ್ರಪತ್ರ-15, ಪ್ರಪತ್ರ-15 ಮತ್ತು ಸರ್ಕಾರಿ ಬಾಕಿ ಪಾವತಿಯ ರಸೀದಿ ನೋಡಿ ಗುರುತಿಸಿದ್ದು ಅವುಗಳನ್ನು ಸಹ ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿರುತ್ತದೆ. ಮುಟೇಷನ್ ರಿಜಿಸ್ಟರ್ ಪ್ರತಿ ಮತ್ತು ನಮೂನೆ-15 ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಸಹ ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ಪಟ್ಟಾ ರಸೀದಿ ಪುಸ್ತಕ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಸಹ ಈಗಾಗಲೇ ನಿಪಿ-41ರ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ಝುರಾಕ್ಸ ಆಧಾರ ಕಾರ್ಡ್ ಮತ್ತು ಝುರಾಕ್ಸ ಪಾನ್ ಕಾರ್ಡ ನ ದಾಖಲೆ ನೋಡಿ ಗುರುತಿಸಿದ್ದು ಸದರಿ ದಾಖಲೆ ಝುರಾಕ್ಸ ದಾಖಲೆಯಾಗಿದ್ದು, ಆರೋಪಿ ಪರ ವಕೀಲರ ಅನುಮತಿಯ ಮೇರೆಗೆ ಸದರಿ ದಾಖಲೆಯನ್ನು **ನಿಪಿ-44** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಶಿವಕುಮಾರ ರವರ

ಸಹಿ ಇರುವ ಎರಡು ಖಾಲಿ ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ–22 ಎಂದು ಗುರುತಿಸಲ್ಪಟ್ಟಿರುತ್ತದೆ. ಅಸ್ಲಂ ಪಾಷರವರ ಸಹಿ ಇರುವ ಮೂರು ಖಾಲಿ ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ–45** ಎಂದು ಗುರುತಿಸಲಾಯಿತು. ಪ್ರಸಾಧ. ಆರ್ ಬೈರಣ್ಣ ರವರ ಸಹಿ ಇರುವ ನಾಲ್ಕು ಖಾಲಿ ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ–46** ಎಂದು ಗುರುತಿಸಲಾಯಿತು. ಸಯ್ಯದ್ ಸಾಜೀದ ಎಂಬುವವರ ಸಹಿ ಇರುವ ಸಿಂಡಿಕೇಟ್ ಬ್ಯಾಂಕ್ ನ 4 ಖಾಲಿ ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–13 ರಿಂದ ನಿಪಿ–16 ಎಂದು ಗುರುತಿಸಲ್ಪಟ್ಟಿರುತ್ತವೆ. ಸಯ್ಯದ್ ಸಾಜೀದ ಮತ್ತು ಎಂ.ಬಿ ವೇದಾವತಿ ರವರ ಹೆಸರಿನಲ್ಲಿರುವ ಖಾಲಿ ಚಾಪ ಕಾಗದವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–17 ಎಂದು ಗುರುತಿಸಲ್ಪಟ್ಟಿರುತ್ತದೆ. ರಿಜ್ವಾನ್ ಬೇಗ ರವರ ಸಹಿ ಇರುವ ಸಿಂಡಿಕೇಟ್ ಬ್ಯಾಂಕ್ ಖಾತೆಯ ಒಂದು ಖಾಲಿ ಚೆಕ್ ನೋಡಿ ಗುರುತಿಸಿದ್ದು ಅದನ್ನು ನಿಪಿ–26 ಎಂದು ಗುರುತಿಸಲ್ಪಟ್ಟಿರುತ್ತದೆ. ಸುವರ್ಣ ಆರ್ ಎಂದು ಸಹಿ ಇರುವ ಕಾರ್ಪೋರೇಷನ ಬ್ಯಾಂಕಿನ ಎರಡು ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ–28 ಎಂದು ಗುರುತಿಸಲ್ಪಟ್ಟಿರುತ್ತವೆ.

ಎಚ್.ಟಿ ಗೀತಾ ರವರು ವೇದಾವತಿರವರಿಗೆ ಬರೆದುಕೊಟ್ಟಂತಹ ಮೂಲ ಕ್ರಯಪತ್ರ ನೋಡಿ ಗುರುತಿಸಿದ್ದು ಅದನ್ನು **ನಿಪಿ–47** ಎಂದು ಗುರುತಿಸಲಾಯಿತು. ಮಂಜುನಾಥಸ್ವಾಮಿ ರವರು ಗೀತಾರವರಿಗೆ ಬರೆದುಕೊಟ್ಟ ಕ್ರಯಪತ್ರದ ರದ್ದಯಾತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–48** ಎಂದು ಗುರುತಿಸಲಾಯಿತು. ಮೈಸೂರು ಮಹಾನಗರ ಪಾಲಿಕೆಯ ಅನುಸೂಚಿ–9 ನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–49** ಎಂದು ಗುರುತಿಸಲಾಯಿತು. ರಿ

ಸರ್ವೇ ನಂ.199 ರ ಇ.ಸಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-50** ಎಂದು ಗುರುತಿಸಲಾಯಿತು. ಗೀತಾ ರವರು ಮಂಜುನಾಥಸ್ವಾಮಿರವರಿಗೆ ಬರೆದುಕೊಟ್ಟಿರುವ ಮೂಲ ಕ್ರಯಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-51** ಎಂದು ಗುರುತಿಸಲಾಯಿತು. ಮಂಜುನಾಥ ಸ್ವಾಮಿರವರ ಹೆಸರಿಗೆ ಇರುವ ಮೈಸೂರು ಮಹಾನಗರ ಪಾಲಿಕೆಯ ಅನುಸೂಚಿ-9 ರ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-52** ಎಂದು ಗುರುತಿಸಲಾಯಿತು. ಗೀತಾರವರು ಮಂಜುನಾಥ ಸ್ವಾಮಿರವರಿಗೆ ಬರೆದುಕೊಟ್ಟಿರುವ ಅಸಲು ಕ್ರಯಪತ್ರದ ತಿದ್ದುಪಡಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-53** ಎಂದು ಗುರುತಿಸಲಾಯಿತು. ಎಚ್.ಟಿ ಗೀತಾರವರಿಗೆ ಬಂದೀಗೌಡ ಮತ್ತು ಇತರರು ಬರೆದುಕೊಟ್ಟಿರುವ ಖರೀದಿ ಅಗ್ರಿಮೆಂಟ್ ನನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-54** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸರ್ಕಾರಿ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶವನ್ನು ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***